ಪೌರತ್ವದ ಆದರ್ಶಗಳು

ಹೃದಯಕಾಂತ್ ದಿವಾನ್

ಶಿಕ್ಷಣ ಎಂಬ ಪ್ರಕ್ರಿಯೆಯು ಒಂದು ಮಗುವನ್ನು ಆತನ/ಆಕೆಯ ದೇಶದ ಭಾಗವನ್ನಾಗಿ ಮಾಡುವಲ್ಲಿ ತಯಾರಿ ಮಾಡುತ್ತದೆ. ಅದು ಮಗುವನ್ನು ದೇಶದ ಉತ್ತಮ ಹಾಗೂ ಜವಾಬ್ದಾರಿಯುತ ಪ್ರಜೆಯನ್ನಾಗಿ ಮಾಡಬೇಕು ಮತ್ತು ಆಕೆ/ಆತ ನಿರ್ವಹಿಸಬೇಕಾದ ಪಾತ್ರಗಳ ಬಗ್ಗೆ ಜ್ಞಾನವನ್ನು ತುಂಬಬೇಕು. ಜೊತೆಗೆ ಹಾಗೆ ಮಾಡಲು ಇರುವ ಕಾರಣಗಳನ್ನು ಮತ್ತು ಅವುಗಳ ವಿವಿಧ ಸ್ವರೂಪಗಳನ್ನೂ ಕೂಡ ತಿಳಿಸಬೇಕಾಗುತ್ತದೆ. ತಾನೊಬ್ಬನೇ(ಳೇ) ಅಲ್ಲ ಇತರರೂ ಇದ್ದಾರೆ ಎಂಬ ಅರಿವನ್ನು ಬೆಳೆಸುವುದು ಕೂಡ ಶ್ರೇಷ್ಠ ಪ್ರಜೆಯ ಪಾಲಿಗೆ ಬಹುಮುಖ್ಯ. ಉತ್ತಮ ಪೌರತ್ವ ಅಂದರೆ, ವಿಶಾಲ ವ್ಯಾಪ್ತಿಯನ್ನು ಪರಿಗಣಿಸುವುದು ಹಾಗು ಈ ಈ ರಾಷ್ಟ್ರಕ್ಕೆ ಅಥವಾ ದೇಶದ ಜನರಲ್ಲಿ ಯಾರೊಬ್ಬರಿಗೇ ಆಗಲಿ ಕೇಡು ತರುವಂತಹ ಪರಿಸ್ಥಿತಿಗಳನ್ನು ಎದುರಿಸುವ ಮತ್ತು ಬದಲಿಸುವ ಪ್ರಯತ್ನಗಳಲ್ಲಿ ತೊಡಗಿಕೊಳ್ಳುವುದೇ ಆಗಿದೆ.

ಒಚಿದು ಮಗುವನ್ನು, ಅದರ ಕಲ್ಪನೆಗಳನ್ನು ಮತ್ತು ಅದು ತೊಡಗಿಕೊಳ್ಳುವ ಮಾರ್ಗಗಳನ್ನು ಅನೇಕ ಸಂಗತಿಗಳು ರೂಪಿಸುತ್ತಾ ಹೋಗುತ್ತವೆ. ಇವುಗಳಲ್ಲಿ ಮೊದಲ ಹೆಜ್ಜೆಯಾಗಿ ಬರುವುದು ಅದರ ಕುಟುಂಬ ಮತ್ತು ಸುತ್ತಲಿನ ಸಮುದಾಯ. ತಮ್ಮ ಮಕ್ಕಳು ಸಮುದಾಯದೊಂದಿಗೆ ಸಾಮರಸ್ಯದಿಂದ ಬೆರೆಯಬೇಕು ಮತ್ತು ಅದು ಕಾರ್ಯನಿರ್ವಹಿಸುವ ರೀತಿಯಲ್ಲಿ ಅಂತರ್ಗತ-ವಾಗಬೇಕು; ಅದು ತನ್ನದೇ ಎಂಬ ಭಾವನೆ ಅವರಿಗೆ ಬರುವಂತಿರಬೇಕು; ಅದಕ್ಕೆ ಕೊಡುಗೆಯನ್ನು ನೀಡುವಂತಿರಬೇಕು ಮತ್ತು ಅಂತಿಮವಾಗಿ ಆ ಮೂಲಕ ವಿಶ್ವಾಸವನ್ನು ಗಳಿಸಿ ಅದನ್ನು ಮುನ್ನಡೆಸುವ ಜವಾಬ್ದಾರಿಗೆ ಹೆಗಲು ಕೊಡುವಂತಿರಬೇಕು; ಈ ರೀತಿ ತಮ್ಮ ಮಕ್ಕಳಿಗೆ ಶಿಕ್ಷಣ ದೊರೆಯಬೇಕು ಎಂಬುದು ಎಲ್ಲ ಕುಟುಂಬಗಳ ಅಪೇಕ್ಷೆ ಮತ್ತು ಎಲ್ಲ ಸಮಾಜಗಳ ಅಗತ್ಯ ಕೂಡ ಆಗಿದೆ. ಸಮುದಾಯಗಳು ವಿಸ್ತಾರಗೊಳ್ಳುತ್ತ ಹೋಗುತ್ತಿರು-ವುದರಿಂದ ಮತ್ತು ಅದರ ಸ್ವರೂಪ ಬಹುತೇಕ ಸಂಕೀರ್ಣ-ವಾಗುತ್ತಿರುವುದರಿಂದ ಮಕ್ಕಳು ತಮ್ಮ ಕುಟುಂಬದ ಹೊರಗಿನವರೊಂದಿಗೆ ಅದರಲ್ಲೂ ಅವರ ಕುಟುಂಬಗಳಿಗೆ ಪರಿಚಯವೇ ಇಲ್ಲದವರ ಜೊತೆ ಹೆಚ್ಚು ಹೆಚ್ಚು ಮುಖಾಮುಖಿ-ಯಾಗುತ್ತಾರೆ. ಹೊಸ ಪರಿಸ್ಥಿತಿಗಳಿಗೆ ಅವರು ಸಾಕ್ಷಿಯಾಗಿ ಅಪರಿಚಿತರೊಂದಿಗೆ ಸಂವಹನ ನಡೆಸುವಂತಿರಬೇಕು. ಮಕ್ಕಳು ಅಪರಿಚಿತರನ್ನು ಎದುರಿಸುವುದರ ಜೊತೆಗೆ ಅಪರಿಚಿತರಲ್ಲದ, ಆದರೆ ಅವರ ಕುಟುಂಬದ ಭಾಗವಾಗಿರದ ಜನರ ಜೊತೆಗೂ ಮುಖಾಮುಖಿಯಾಗಬೇಕು. ತಮ್ಮ ಕುಟುಂಬಗಳ ಬೆಂಬಲವಿಲ್ಲದೆ ಇಂಥವರ ಜೊತೆ ಸಂಬಂಧ ಬೆಳೆಸಿಕೊಳ್ಳಲು ಮತ್ತು ಅವರೊಂದಿಗೆ ಹೇಗೆ ವರ್ತಿಸಬೇಕು ಎಂಬುದನ್ನು ಅರ್ಥ ಮಾಡಿಕೊಳ್ಳುವುದು ಮುಖ್ಯವಾಗುತ್ತದೆ. ನೈಜ ಪರಿಸ್ಥಿತಿಯಲ್ಲಿ ಕೆಲವು ಕಟ್ಟುಕಟ್ಟಳೆಗಳು ಇರುತ್ತವೆ ಎನ್ನುವುದು ಬೇರೆ ಮಾತು.

ಸಂವಹನದ ಸೂಕ್ಷ್ಮತೆಯ ವ್ಯತ್ಯಾಸಗಳನ್ನು ಕಲಿಯುವುದು

ಮಕ್ಕಳು ತಮ್ಮ ಸುತ್ತಮುತ್ತಲಿನ ಪ್ರಪಂಚದಲ್ಲಿ ಎದುರಾಗುವ ಪರಿಸ್ಥಿತಿಗಳನ್ನು ನಿಭಾಯಿಸಲು. ಆಯ್ಕೆಗಳನ್ನು ಮಾಡಿಕೊಳ್ಳ-ಬೇಕಾಗುತ್ತದೆ. ಅವರ ಮೇಲೆ ಸಾಕಷ್ಟು ಪ್ರಭಾವವನ್ನು ಅವರ ಹತ್ತಿರದ ಜಗತ್ತಿನಲ್ಲಿ ಮಕ್ಕಳಿಗಾಗಿ ಕಾಳಜಿ ವಹಿಸುವವರು, ಅವರ ಬಗ್ಗೆ ಉದಾಸೀನ ತೋರುವವರು, ಎಲ್ಲಕ್ಕಿಂತ ಮುಖ್ಯವಾಗಿ ಅವರನ್ನು ಉಪಾಯದಿಂದ ಬಳಸಿಕೊಳ್ಳಲು ಬಯಸುವವರು ಒಳಗೊಂಡಿರುತ್ತಾರೆ. ಈ ಜನರ ನಡುವೆ ಎಷ್ಟೊಂದು ವ್ಯತ್ಯಾಸಗಳಿವೆ ಎಂಬುದನ್ನು ಮಕ್ಕಳು ಅರ್ಥ ಮಾಡಿಕೊಳ್ಳಬೇಕು ಮತ್ತು ಪ್ರತಿಯೊಂದಕ್ಕೂ ಸೂಕ್ತವಾಗಿ ಪ್ರತಿಕ್ರಿಯಿಸುವಂತಾಗಬೇಕು. ವಿಶೇಷವಾಗಿ, ಯಾರಾದರೊಬ್ಬರು ಪ್ರಲೋಭನೆಯ ಮೂಲಕ ಮತ್ತು ಅಥವಾ ಪ್ರಾಬಲ್ಯದ ಮೂಲಕ ಆಕೆ/ಆತನನ್ನು ದುರುಪಯೋಗ ಪಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರೆ ಅದು ಆ ಮಗುವಿಗೆ ಗೊತ್ತಾಗಬೇಕು ಮತ್ತು ಅದಕ್ಕೆ ಆ ಮಗು ಪ್ರತಿರೋಧ ತೋರುವಂತಿರಬೇಕು. ಇದಕ್ಕಾಗಿ ಮಗುವಿಗೆ ತನ್ನ ಬಗೆಗಿನ ಸ್ವ ಅರಿವು, ದೇಹ, ತನ್ನ ಮತ್ತು ಅದರ ಹಕ್ಕುಗಳು ಹಾಗು ಅದಕ್ಕಾಗಿ ಉಳಿದವರು ಏನು ಮಾಡಬಹುದು ಎನ್ನುವ ಬಗ್ಗೆ ತಿಳಿವನ್ನು ಮೂಡಿಸಿ ಶಿಕ್ಷಣವನ್ನು ನೀಡಬೇಕಾಗುತ್ತದೆ.

ಇಂತಹ ಪ್ರಕರಣಗಳಲ್ಲೆಲ್ಲ ಯಾವ ರೀತಿಯ ನಿಲುವನ್ನು ಹೊಂದಿರಬೇಕು ಎನ್ನುವ ಬಗ್ಗೆಯೂ ಶಿಕ್ಷಣವನ್ನು ನೀಡಬೇಕಾದ ಅಗತ್ಯವಿದೆ. ಕಾಲಕಾಲಕ್ಕೆ ಸಮಾಜ ಮತ್ತು ಪರಿಸ್ಥಿತಿಗಳು ಬದಲಾಗುತ್ತಿರುವಂತೆ ಅದಕ್ಕೆ ತಕ್ಕಂತೆ ದುರುಪಯೋಗ-ಪಡಿಸಿಕೊಳ್ಳುವ ಮತ್ತು ಅತಿಕ್ರಮಣದ ವರ್ತನೆಗಳ ಸ್ವರೂಪಗಳೂ ಬದಲಾಗಬಹುದು. ಹಾಗಾಗಿ ಮಕ್ಕಳಿಗೆ ನೀಡುವ ಶಿಕ್ಷಣ ಕೂಡ ಇಂಥವುಗಳಿಗೆ ಹೊಸ ಬಗೆಯ ಪ್ರತಿಕ್ರಿಯೆಗಳನ್ನು ಒಳಗೊಂಡಿರಬೇಕು. ಹಾಗಾಗಿ ಒಂದು ಸಮಾಜದ ಸದಸ್ಯನಾಗುವ ಮತ್ತು ಸಂಭವನೀಯ ಅಪಾಯಗಳಿಂದ ರಕ್ಷಿಸಿಕೊಳ್ಳುವಂತೆ ತಯಾರಾಗುವ ಇಡೀ ಪ್ರಕ್ರಿಯೆಯಲ್ಲಿ ಶಿಕ್ಷಣ ಮತ್ತು ಕಲಿಕೆಯು ಒಂದು ಭಾಗವಾದರೆ ಮಾತ್ರ ಇವೆಲ್ಲವೂ ಸಾಧ್ಯವಾಗುತ್ತದೆ.

ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಈ ದೇಶದ ಪ್ರಜೆಯಾಗಿ ಒಂದು ಮಗು ಸುರಕ್ಷಿತವಾಗಿ ಬೆಳೆಯುವುದು, ಸುತ್ತಲಿನ ಪರಿಸರದ ಬಗ್ಗೆ ಅರಿವನ್ನು ಹೊಂದುವುದು ಮತ್ತು ಇಂತಹ ವ್ಯವಸ್ಥೆಯಲ್ಲಿಯೇ ತನ್ನನ್ನು ತಾನು ಸಂರಕ್ಷಿಸಿಕೊಳ್ಳುವ ಸಾಮರ್ಥ್ಯವನ್ನು ಬೆಳೆಸಿ-ಕೊಳ್ಳುವಂತೆ ಮಾಡುವುದು ಶಿಕ್ಷಣದ ಮುಖ್ಯ ಗುರಿಯಾಗುತ್ತದೆ. ತನ್ನ ಸುತ್ತಮುತ್ತಲೇ ಇರುವ ಅನೇಕ ಸೌಲಭ್ಯಗಳ ಬಳಕೆಯ ವೇಳೆ ಎದುರಾಗಬಹುದಾದಅಪಾಯಗಳ ಬಗ್ಗೆ ಆಕೆಗೆ ಅರಿವಿರಬೇಕು ಮತ್ತು ಮುಂಜಾಗ್ರತೆಯನ್ನು ಹೊಂದಿರಬೇಕು. ಉದಾಹರಣೆಗೆ, ರಸ್ತೆಯಲ್ಲಿ ನಡೆದಾಡುವಾಗ, ಎದುರಾಗುವ ವಿದ್ಯುತ್ ತಂತಿಗಳು, ಜಲಮೂಲಗಳು ಇತ್ಯಾದಿ. ಸಹಬಾಳ್ವೆ ಮತ್ತು ಒಡನಾಟಕ್ಕೆ ಈ ಮಗುವಿಗೆ ನಮ್ಮ ಸುತ್ತ ಜಾರಿಯಲ್ಲಿರುವ ನಿಯಮಗಳ ಬಗ್ಗೆಯೂ ತಿಳಿದಿರಬೇಕು. ಉದಾಹರಣೆಗೆ, ಆಟವನ್ನು ಆಡುವಾಗ ನಿಯಮವನ್ನು ಪಾಲಿಸಬೇಕು, ಪ್ರತಿ ಬಾರಿಯೂ ಒಬ್ಬರೇ ಗೆಲ್ಲಲು ಸಾಧ್ಯವಿಲ್ಲ, ಪ್ರತಿಯೊಬ್ಬರಿಗೂ ಒಂದಲ್ಲ ಒಚಿದು ಸುತ್ತಿನಲ್ಲಿ ಅವಕಾಶ ಸಿಕ್ಕೇ ಸಿಗಬೇಕು ಇತ್ಯಾದಿ ಅಂಶಗಳು. ಒಂದು ಸಮುದಾಯದ ಭಾಗವಾಗಿರುವಾಗ ಮಗುವು ಸಂಪ್ರದಾಯಗಳನ್ನು,

ಆಚರಣೆಗಳನ್ನು ಮತ್ತು ಆಸುಪಾಸಿನಲ್ಲಿ ಹಾಗು ವಿಸ್ತರಿತ ಕುಟುಂಬದಲ್ಲಿನ ರೀತಿ–ರಿವಾಜುಗಳನ್ನು ಕಲಿತುಕೊಳ್ಳಬೇಕು. ಒಂದು ಸಮುದಾಯದಲ್ಲಿ ಬೆಳೆಯುವಾಗ ಮಗುವಿಗೆ ಈ ಎಲ್ಲಾ ಅವಕಾಶಗಳು ಸಾಮಾನ್ಯವಾಗಿ ಇದ್ದೇ ಇರುತ್ತವೆ. ಆದರೆ ಇವೆಲ್ಲವನ್ನು ಮಗುವಿಗೆ ಸ್ಪಷ್ಟವಾಗಿ, ಪ್ರಜ್ಞಾಪೂರ್ವಕವಾಗಿ ತಿಳಿಸುವ ಕೆಲಸ ಮಾಡಿರುವುದಿಲ್ಲ ಅಥವಾ ಜಾರಿಗೆ ತಂದಿರುವುದಿಲ್ಲ, ಬದಲಾಗಿ ಇದು ಸಂಪ್ರದಾಯದ ಹಾಗು ಸಂಸ್ಕೃತಿಯ ಭಾಗವಾಗಿ ಮಗು ಅನುಭವಿಸಬೇಕಾಗಿರುತ್ತದೆ. ಮಗುವು ಹೇಗೆ ಬೆಳೆಯುತ್ತದೆ ಮತ್ತು ತನ್ನದೇ ಆದ ನಂಬಿಕೆಯ ವ್ಯವಸ್ಥೆಯನ್ನು ಹೇಗೆ ಬೆಳೆಸಿಕೊಳ್ಳುತ್ತದೆ ಎನ್ನುವುದರ ಮೇಲೆ ಶಿಕ್ಷಣ ಪರಿಣಾಮ ಬೀರುತ್ತದೆ.

ಮಗುವಿಗೆ ನಿಶ್ಚಿತವಾಗಿ ಅನೇಕ ಹಕ್ಕುಗಳಿರುತ್ತವೆ– ಸೂಕ್ತ ರೀತಿಯಲ್ಲಿ ಆರೈಕೆ ಹೊಂದುವುದು, ಸರಿಯಾದ ರಕ್ಷಣೆ ಪಡೆಯುವುದು, ಇವೆಲ್ಲವನ್ನೂ ಹಾಗು ಇನ್ನೂ ಅನೇಕ ಸಂಗತಿಗಳನ್ನು ಅರ್ಥಮಾಡಿ–ಕೊಳ್ಳುವಂತೆ ಶಿಕ್ಷಣವನ್ನು ಗಳಿಸುವುದು, ತನ್ನ ಸುತ್ತಲಿನ ಸಂಪನ್ಮೂಲಗಳು ಮತ್ತು ಚಟುವಟಿಕೆಗಳಲ್ಲಿ ಆಕೆಗಿರುವ ಪಾಲನ್ನು ಪಡೆಯುವುದು ಇವೆಲ್ಲವೂ ಸೇರಿರುತ್ತವೆ. ಅಂದರೆ ಕರ್ತವ್ಯಗಳೆಂದು ಪರಿಭಾವಿಸಲಾಗಿರುವ ಕೆಲವು ನಡವಳಿಕೆ ಮತ್ತು ಸಹಭಾಗಿತ್ವದ ನಿಯಮಗಳನ್ನು ಪಾಲಿಸುವ ಮೂಲಕ ಮಗು ತನ್ನ ಪಾತ್ರಗಳನ್ನು ನಿರ್ವಹಿಸಬೇಕಾಗುತ್ತದೆ. ಸಮುದಾಯದಲ್ಲಿ ಬೆರೆತಿರುವ ಮಗುವಿನ ಶಿಕ್ಷಣದಲ್ಲಿ ಇವೆಲ್ಲವೂ ಒಳಗೊಂಡಿರುತ್ತವೆ ಮತ್ತು ಇದು ಸಹಜ ಪ್ರಕ್ರಿಯೆಯಾಗಿದೆ.

ಸಂಕೀರ್ಣ ಸಮಾಜದಲ್ಲಿ ಹಕ್ಕುಗಳು ಮತ್ತು ಕರ್ತವ್ಯಗಳು

ಸಂಸ್ಕೃತೀಕರಣದ ಮೂಲಕ ಈ ಎಲ್ಲ ಅಂಶಗಳನ್ನು ಮೈಗೂಡಿಸಿ–ಕೊಳ್ಳುವ ಈ ಪ್ರಕ್ರಿಯೆ (acculturation) ಮಾತ್ರ ಶಿಕ್ಷಣದ ಅಗತ್ಯವನ್ನು ಪೂರೈಸುವುದಿಲ್ಲ. ನಮ್ಮ ಸುತ್ತಲಿನ ಸಮಾಜವೂ ಅಭಿವೃದ್ಧಿ ಹೊಂದಬೇಕು, ರೂಪಾಂತರಗೊಳ್ಳಬೇಕು, ಹೊಸ ಹೊಸ ವಿಧಾನಗಳನ್ನು ಅಳವಡಿಸಿಕೊಳ್ಳಬೇಕು ಎಂಬುದು ನಮಗೆ ಗೊತ್ತಿದೆ. ಇದರಿಂದ ಮುಖ್ಯವಾಗಿ ಮಗುವಿನಲ್ಲಿ ನಮ್ಮ ಕುತೂಹಲ ಹೆಚ್ಚುತ್ತದೆ, ಪರಿಶೋಧನೆ ಮಾಡುವ, ತನಿಖೆ ನಡೆಸುವ ಮತ್ತು ಪ್ರಶ್ನೆಗಳನ್ನು ಕೇಳುವ ಆಸಕ್ತಿ ಮೂಡುತ್ತದೆ. ಇವೆಲ್ಲದರ ಬಗ್ಗೆ ಶಿಕ್ಷಣವನ್ನು ಪಡೆಯುವ ಹಕ್ಕು ಮಗುವಿಗೆ ಇರಬೇಕು. ಇದರಿಂದ ಮಗು ಪ್ರೌಢಾವಸ್ಥೆಗೆ ಬಂದಾಗ ತನಗೆ ತಕ್ಕುದಾದ ಆಯ್ಕೆಯನ್ನು ಮಾಡಿಕೊಳ್ಳಲು ಮತ್ತು ತಾನು ಅರಿತಿರುವ ಸಮುದಾಯಕ್ಕಿಂತ ಭಿನ್ನವಾದ ಹೊಸ ಪರಿಸ್ಥಿತಿಗಳು ಮತ್ತು ಸವಾಲುಗಳನ್ನು ನಿಭಾಯಿಸುವ ಸಾಮರ್ಥ್ಯವನ್ನು ಹೊಂದಲು ಸಾಧ್ಯವಾಗುತ್ತದೆ. ಸಮುದಾಯ ಎನ್ನುವುದು ದೇಶ ಮತ್ತು ವಿಶ್ವವನ್ನು ಒಳಗೊಂಡಿರುವ ವಿಶಾಲ ಸಮಾಜದ ಒಂದು ಭಾಗ ಎನ್ನುವುದು ಕೂಡ ನಮಗೆ ತಿಳಿದಿದೆ. ಇಂತಹ ಜ್ಞಾನವನ್ನು ಪಡೆದುಕೊಳ್ಳುವುದು ತನ್ನಿಂದ ಸಾಧ್ಯವಿದೆ ಎಂಬುದು ಮಗುವಿಗೆ ಗೊತ್ತಾಗಬೇಕು. ಜೊತೆಗೆ ತಾನು ಏನಾಗಬೇಕು ಎಂಬುದನ್ನು ಆಯ್ಕೆ ಮಾಡಿಕೊಳ್ಳುವ ಹಕ್ಕು ಕೂಡ ಅದಕ್ಕಿರಬೇಕು. ಎಲ್ಲಕ್ಕಿಂತ ಮುಖ್ಯವಾಗಿ ತನ್ನ ಸುತ್ತಲಿರುವ, ಅದರಲ್ಲೂ ವಿಶೇಷವಾಗಿ ತನ್ನ ಕುಟುಂಬ ಹಾಗು ಸಮುದಾಯದಲ್ಲಿ ಲಭ್ಯವಿರುವ ಕೆಲವೇ ಕೆಲವು ಆಯ್ಕೆಗಳಿಗೆ ಮಾತ್ರ ಸೀಮಿತವಾಗುವಂತೆ ಇರಬಾರದು. ಹಕ್ಕುಗಳನ್ನು ಒಳಗೊಂಡ ಈ ಚೌಕಟ್ಟಿನಲ್ಲಿ ನಾವು ಇವುಗಳನ್ನೆಲ್ಲ ಸೇರಿಸಿದಾಗ ಅದು ಏಕಾಏಕಿ ಇನ್ನಷ್ಟು ವಿಶಾಲವಾಗುತ್ತ ಹೋಗುತ್ತದೆ.

ಈಗಾಗಲೇ ಸಂಕೀರ್ಣವಾಗಿರುವ ಸಮಾಜದಲ್ಲಿ ಮತ್ತು ಇನ್ನಷ್ಟು ಸಂಕೀರ್ಣವಾಗುತ್ತಿರುವ ವ್ಯವಸ್ಥೆಯಲ್ಲಿ ಕೆಲವು ವಿಶೇಷ ಪಾತ್ರಗಳನ್ನು ನಿರ್ವಹಿಸಲು ನಿರ್ದಿಷ್ಟವಾದ ಸಿದ್ಧತೆಗಳ ಅಗತ್ಯವಿರುತ್ತದೆ. ಪ್ರತಿಯೊಂದು ಮಗುವಿಗೂ ಇದರ ಬಗ್ಗೆ ಅರಿವಿರಬೇಕು ಮತ್ತು ಇಂತಹ ಅವಕಾಶಗಳ ಸಾಧ್ಯತೆಗಳನ್ನು ತಿಳಿದುಕೊಂಡಿರಬೇಕು. ಉದಾಹರಣೆಗೆ, ಮಕ್ಕಳಿಗೆ ಇಂತಹ ಆಯ್ಕೆಗಳನ್ನು ತಲುಪುವ ದಾರಿಗಳು ಯಾವುವು ಮತ್ತು ಎಂತಹ ಒಂದು ವ್ಯವಸ್ಥೆಯಿಂದ ಅವರಿಗೆ ಸಿದ್ಧತೆ ಮಾಡಿಕೊಳ್ಳಲು ಸಹಾಯವಾಗುತ್ತದೆ ದ ಎಂಬುದರ ಬಗ್ಗೆ ತಿಳಿದಿರಬೇಕು. ಸಮಾನತೆಯ ಭರವಸೆಯನ್ನು ನೀಡುವ ಪ್ರಜಾಸತ್ತಾತ್ಮಕ ರಾಷ್ಟ್ರದಲ್ಲಿ ಇದು ಸರಿಯಾದ ಮಾರ್ಗ ಕೂಡ ಆಗಿದೆ. ಒಂದು ಮಗುವಿಗೆ ಒಬ್ಬ ಕಲಾವಿದ, ಒಬ್ಬ ಸಂಗೀತಗಾರ, ಒಬ್ಬ ಎಂಜಿನಿಯರ್, ಒಬ್ಬ ವೈದ್ಯ, ಒಬ್ಬ ಶಿಕ್ಷಕ ಅಥವಾ ಒಬ್ಬ ದಾದಿಯಾಗಿ ನಿರ್ವಹಿಸಬೇಕಾದ ಪಾತ್ರಗಳನ್ನು ತಿಳಿಸುವ ಶೈಕ್ಷಣಿಕ ಪ್ರಕ್ರಿಯೆ ಇರಬೇಕು ಎಂಬುದನ್ನು ಇದು ಸೂಚಿಸುತ್ತದೆ.

ವಾಸ್ತವವಾಗಿ, ಮಕ್ಕಳು ಬದುಕುತ್ತಿರುವ ಮತ್ತು ಬೆಳೆಯುತ್ತಿರುವ ನಿಜವಾದ ಪರಿಸ್ಥಿತಿಗಳು ಇವುಗಳಿಂದ ಸಾಕಷ್ಟು ವಿಭಿನ್ನವಾಗಿವೆ. ತಾನು ತಲುಪಬೇಕಾಗಿರುವ ಗುರಿಗಳಿಗಾಗಿ ಕೆಲಸ ಮಾಡುವ ಮತ್ತು ತನ್ನ ಆಕಾಂಕ್ಷೆಗಳೆಲ್ಲ ಸಾಕಾರಗೊಳ್ಳಲು ಬೇಕಾದ ಎಲ್ಲ ಪ್ರಯತ್ನಗಳನ್ನು ಮಾಡುವ ಮಗುವಿನ ಜವಾಬ್ದಾರಿಯು ಈ ಹಕ್ಕಿನಲ್ಲಿ ಹಾಸುಹೊಕ್ಕಾಗಿದೆ ಎಂಬುದು ಮಾತ್ರ ಇದರಲ್ಲಿ ಸ್ಪಷ್ಟ. ಹಾಗಾಗಿ, ಇದಕ್ಕೆ ತಕ್ಕುದಾದ ಸಂಪನ್ಮೂಲಗಳು ಹಾಗು ಅವಕಾಶವನ್ನು ಒದಗಿಸಬೇಕು ಎಂದು ನಿರೀಕ್ಷಿಸುವುದು ಮಗುವಿನ ಹಕ್ಕಾಗಿರುವುದರ ಜೊತೆಗೆ ಅದಕ್ಕಾಗಿ ಸಾಕಷ್ಟು ಪ್ರಯತ್ನಗಳನ್ನು ಮಾಡುವುದು ಅದರ ಜವಾಬ್ದಾರಿ ಕೂಡ ಆಗಿದೆ. ಒಂದು ಸಮುದಾಯದಲ್ಲಿ ಜವಾಬ್ದಾರಿಗಳಿಲ್ಲದೆ ಅನೇಕ ಹಕ್ಕುಗಳು ಇರಲಾರವು ಎಂಬುದು ಒಂದರ್ಥದಲ್ಲಿ ನಿಜವಾದರೂ ಅವರಿಗೆ ಕೇವಲ ಜವಾಬ್ದಾರಿಗಳಿವೆ ಮತ್ತು ಕೆಲವೇ ಕೆಲವು ಅಥವಾ ಯಾವುದೇ ಹಕ್ಕುಗಳಿಲ್ಲ ಎನ್ನುವ ಪರಿಸ್ಥಿತಿಗಳಲ್ಲಿ ಮಕ್ಕಳು ಸಿಕ್ಕಿಹಾಕಿಕೊಳ್ಳಬಾರದು. ಒಂದು ಸಮಾಜವು ಅತ್ಯಗತ್ಯ ಎಂದು ಪರಿಗಣಿಸುವ ಜವಾಬ್ದಾರಿಗಳು ಮತ್ತು ಹಕ್ಕುಗಳು ಎಲ್ಲ ಮಕ್ಕಳನ್ನು ತಲುಪುವಂತೆ ಮಾಡುವುದು ಆ ಸಮಾಜದ ಕರ್ತವ್ಯ ಕೂಡ ಆಗಿರುವುದು ಇನ್ನೊಂದು ಬಹುಮುಖ್ಯ ಸಂಗತಿಯಾಗಿದೆ. ಹಕ್ಕುಗಳು ಮತ್ತು ಜವಾಬ್ದಾರಿಗಳು ರಾಷ್ಟ್ರದ ಎಲ್ಲ ಮಕ್ಕಳಿಗೆ ನ್ಯಾಯಸಮ್ಮತವಾಗಿ ಹಂಚಿಕೆಯಾಗಿವೆಯೇ ಎಂಬುದನ್ನು ನಾವು ಪ್ರತಿಯೊಬ್ಬರೂ ಕೇಳಿಕೊಳ್ಳಬೇಕಾಗಿದೆ ಕೂಡ.

ರಾಷ್ಟ್ರದ ಪ್ರಜೆಗಳಾಗಲು ಕಲಿಕೆ

ಇಂತಹ ಸ್ವಾಭಾವಿಕವಾದ ಶಿಕ್ಷಣವು ಮಕ್ಕಳು ಬದುಕುತ್ತಿರುವ ಪರಿಸರದಿಂದಲೇ ಲಭ್ಯವಾಗುತ್ತದೆ. ಇದು ಅವರ ಕುಟುಂಬಗಳಿಂದ, ಸಮುದಾಯ, ಮಾಧ್ಯಮ ಮತ್ತು ಸಮಾಜದಲ್ಲಿ ವ್ಯಕ್ತಿಯ ಪಾತ್ರಗಳು ಮತ್ತು ಹಕ್ಕುಗಳು, ಪರಸ್ಪರ ಸಂಬಂಧಗಳು ಹಾಗು ಸಂವಹನಗಳಂಥ ಇತರ ಮೂಲಗಳಿಂದ ಸಮ್ಮಿಳಿತಗೊಂಡ ದೃಷ್ಟಿಕೋನಗಳಿಂದ ಅವರಿಗೆ ಸಿಗುತ್ತದೆ. ಮಕ್ಕಳಲ್ಲಿ ಬೇಡಿಕೆಗಳನ್ನು ಹಾಗು ಮಹತ್ವಾಕಾಂಕ್ಷಿ ಮೌಲ್ಯಗಳನ್ನು ಹುಟ್ಟುಹಾಕಲು ಬಯಸುವ ಮಾರುಕಟ್ಟೆ ಶಕ್ತಿಗಳಿದ್ದು, ಸ್ಪರ್ಧೆಯನ್ನು ಉತ್ತೇಜಿಸುವುದು ಅಥವಾ ವಿಚಾರಹೀನವಾದ ಅರ್ಹತೆ ಮತ್ತು ಬೇಡಿಕೆಗಳ ಪ್ರಜ್ಞೆಯನ್ನು ಹುಟ್ಟುಹಾಕುವುದು ಅವುಗಳ ಉದ್ದೇಶವಾಗಿದೆ. ಇಂತಹ ಶಕ್ತಿಗಳು ಸಮಾನತೆ, ವೈವಿಧ್ಯತೆ ಮತ್ತು ಬಹುತ್ವಕ್ಕೆ ತಪ್ಪು ಅರ್ಥವನ್ನು ನೀಡುವ ಮೂಲಕ ವಾಸ್ತವವನ್ನು ಮರೆಮಾಚಬಹುದು. ಯುವಕರಿಗೆ ತಪ್ಪು

ಮಾಹಿತಿಯನ್ನು ನೀಡಿ ಅವರನ್ನು ತೀವ್ರಗಾಮಿಗಳನ್ನಾಗಿ ಮಾಡುವ ಪ್ರಯತ್ನದಲ್ಲಿ ತೊಡಗಿರುವ ಸಾಮಾಜಿಕ ಮತ್ತು ರಾಜಕೀಯ ಶಕ್ತಿಗಳು ನಮ್ಮ ನಡುವೆ ಇವೆ.

ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಮಾಧ್ಯಮದ ಅತಿಯಾದ ಲಭ್ಯತೆ ಮತ್ತು ಬಳಕೆಯಿಂದಾಗಿ ಸಾಕಷ್ಟು ಪ್ರಮಾಣದ ಅನಿಯಂತ್ರಿತ ಮಾಹಿತಿಗಳು ಎಲ್ಲರನ್ನೂ ತಲುಪುತ್ತಿವೆ. ತಾವು ಪಡೆದ ಮಾಹಿತಿಯ ಸ್ವರೂಪ, ಉದ್ದೇಶ ಮತ್ತು ನಿಖರತೆಯನ್ನು ಬಳಕೆದಾರರು ತಿಳಿದು–ಕೊಳ್ಳಬೇಕಾದ ಅಗತ್ಯವಿರುತ್ತದೆ. ಚುನಾವಣೆಯೂ ಸೇರಿದಂತೆ ಕೆಲವು ಸಂಕುಚಿತವಾದ ಲಾಭಗಳಿಗೆ ಜನರನ್ನು ಸೆಳೆಯುವ ಸೀಮಿತ ಉದ್ದೇಶ ಈ ಮಾಹಿತಿಯ ಹಿಂದಿರುವ ಸಾಧ್ಯತೆಯಿರುತ್ತದೆ. ಇಂತಹ ಸಂದೇಶಗಳ ಮೂಲಕ ಸತ್ಯಾಸತ್ಯತೆಯನ್ನು ಅರಿತುಕೊಳ್ಳಲು ಅವುಗಳನ್ನು ಸರಿಯಾಗಿ ವಿವೇಚಿಸಿ ಪ್ರಜಾಸತ್ತಾತ್ಮಕ ಸಂವಿಧಾನದ ಮೂಲತತ್ವಕ್ಕೆ ಅನುಗುಣವಾಗಿ ನ್ಯಾಯಸಮ್ಮತವಾದ ಅಭಿಪ್ರಾಯವನ್ನು ಹೊಂದುವಲ್ಲಿ ಶಕ್ತನಾಗುವುದು ತಿಳುವಳಿಕೆಯುಳ್ಳ ಮತ್ತು ಸಕ್ರಿಯ ನಾಗರಿಕನಿಗಿರಬೇಕಾದ ಒಂದು ಪ್ರಮುಖ ಅಂಶವಾಗಿದೆ.

ಮಕ್ಕಳು ಇಂತಹ ಜ್ಞಾನವನ್ನು ಪಡೆಯಲು ಅನುಕೂಲವಾಗುವಂತೆ ಪೌರತ್ವಕ್ಕೆ ಸಿದ್ಧಪಡಿಸುವ ಶಿಕ್ಷಣವು ಸೂಕ್ತವಾದ ಸಾಧನಗಳನ್ನು ಅಭಿವೃದ್ಧಿಪಡಿಸಬೇಕಾದ ಅಗತ್ಯವಿದೆ. ಈ ಸಾಧನಗಳೆಂದರೆ; ಮೊದಲನೆಯದಾಗಿ, ಜ್ಞಾನದ ಹೊಸಹೊಸ ಮೂಲಗಳು ಲಭ್ಯವಾಗುವಂತೆ ಮಾಡುವ ಸಾಮರ್ಥ್ಯ. ಅಂದರೆ ಆತ್ಮವಿಶ್ವಾಸದ ಅರಿವಿನೊಂದಿಗೆ ಓದುವ ಸಾಮರ್ಥ್ಯ ಮತ್ತು ಇದನ್ನು ಸಾಧ್ಯವಾದಷ್ಟು ಹೆಚ್ಚಿಸಿಕೊಳ್ಳುವ ಬಯಕೆಯನ್ನು ಹೊಂದುವುದು. ಎರಡನೆಯ ಅಂಶ ಏನೆಂದರೆ, ಒಂದು ಅಭಿಪ್ರಾಯ, ಒಂದು ಹೇಳಿಕೆ (ಅಥವಾ ಪಠ್ಯದ ಭಾಗ) ತರ್ಕಬದ್ಧವಾಗಿದೆಯೇ ಮತ್ತು ಆಂತರಿಕವಾಗಿ ಸ್ಥಿರವಾಗಿದೆಯೇ ಮತ್ತು ಇತರ ಮೂಲಗಳಿಗೆ ಅದು ಹೇಗೆ ಹೊಂದಾಣಿಕೆಯಾಗುತ್ತದೆ ಎಂಬುದನ್ನು ತುಲನೆ ಮಾಡುವ ಪ್ರಖರವಾದ ಸಾಮರ್ಥ್ಯ. ಇದಕ್ಕೆ ಮುಕ್ತವಾದ ಮನಸು ಬೇಕು ಮತ್ತು ತೀರ್ಪನ್ನು ಬದಿಗಿಡುವಂತಹ ಮನೋಧರ್ಮ ಬೇಕಾಗುತ್ತದೆ. ಆದರೆ, ಇಂತಹ ತಾರ್ಕಿಕ, ಬುನಾದಿ ಸಾಮರ್ಥ್ಯಗಳ ಹರಿತವಾದ ಸಾಧನಗಳಿಗೆ ಮೂಲಭೂತವಾದ ನೈತಿಕ ಚೌಕಟ್ಟಿನ ಅಗತ್ಯವಿದೆ. ಸಾಧನಗಳನ್ನು ಬಳಸುವ ಸಿದ್ಧಾಂತಗಳು ಯಾವುವು ಎಂಬುದನ್ನು ಕುರಿತು ಈ ಚೌಕಟ್ಟು ಸಲಹೆ ನೀಡುತ್ತದೆ ಮತ್ತು ಇವು ಸಾಂವಿಧಾನಿಕ ಹಾಗು ಮಾನವೀಯ ಮೌಲ್ಯಗಳಿಂದ ಹೊರಹೊಮ್ಮಬೇಕು. ಮೂಲ ಸಾಕ್ಷರತೆಯ ಜೊತೆಗೆ, ಮೂಲ ಗಣಿತದ ಸಾಮರ್ಥ್ಯ, ವೈಜ್ಞಾನಿಕ ಮತ್ತು ವಿವೇಚನಾಶೀಲ ಮನೋಧರ್ಮ ಇವೆಲ್ಲವನ್ನೂ 2020ರ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಮತ್ತೊಮ್ಮೆ ಪ್ರತಿಪಾದಿಸಲಾಗಿದೆ.

ಪ್ರಸ್ತಾವನೆ ಎಂಬ ಭರವಸೆ

ಭಾರತೀಯ ಪೌರರಿಗೆ ಅನ್ವಯವಾಗುವ ಮೌಲ್ಯಗಳ ಸಾರವು ಸಂವಿಧಾನದ ಪ್ರಸ್ತಾವನೆಯಲ್ಲಿ ಜನರು ಕೊಟ್ಟುಕೊಂಡಿರುವ ವಾಗ್ದಾನದಿಂದ ಬರುತ್ತದೆ. ವೈಜ್ಞಾನಿಕ ಮನೋಭಾವ ಮತ್ತು ವೈಚಾರಿಕತೆಯ ಜೊತೆಗೆ ಸಮಾನತೆ, ನ್ಯಾಯ, ಸ್ವಾತಂತ್ರ್ಯ ಹಾಗು ಭ್ರಾತೃತ್ವದ ವಾಗ್ದಾನ ಇದಾಗಿದೆ. ಶಾಲೆಗಳಲ್ಲಿ ವೈವಿಧ್ಯತೆಗೆ ಮನ್ನಣೆ ನೀಡುವುದು ಸೇರಿದಂತೆ ಈ ವಾಗ್ದಾನವು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯಕ್ಕೆ ಸಂಬಂಧಿಸಿದ ಅನೇಕ ಪರಿಣಾಮಗಳನ್ನು ಹೊಂದಿವೆ. ವೈವಿಧ್ಯತೆಯನ್ನು ಹೊಂದಿರುವ ಜನರನ್ನು ಹೇಗೆ ನೋಡಿ–ಕೊಳ್ಳಲಾಗುತ್ತದೆ ಎಂಬುದರ ಮೌಲ್ಯಮಾಪನ ಮತ್ತು ಅಸಮಾನತೆಗೆ ಪ್ರತಿಕ್ರಿಯಿಸುವುದು ಹೇಗೆ ಎಂಬುದರ ಅರಿವನ್ನು ಪ್ರತಿಯೊಬ್ಬರಲ್ಲಿ ಮೂಡಿಸುವ ಕೆಲಸವನ್ನು ಶಿಕ್ಷಣವು ಮಾಡುತ್ತದೆ.

ಸಂವಿಧಾನದಲ್ಲಿ ನೀಡಲಾದ ವಾಗ್ದಾನಗಳ ಪೈಕಿ ಅತ್ಯಂತ ಮಹತ್ವದ್ದೆಂದರೆ ಭ್ರಾತೃತ್ವದ ವಾಗ್ದಾನ. ವೈವಿಧ್ಯತೆಯಲ್ಲಿ ಏಕತೆಯನ್ನು ಸಾಧಿಸಲು ಇದು ಅತ್ಯಂತ ಅಗತ್ಯದ್ದು ಹಾಗು ಬದುಕಿನ ಬಹುತ್ವದ ಸ್ವರೂಪಕ್ಕೆ ನೀಡುವ ಗೌರವವಾಗಿದೆ. ಉಳಿದೆಲ್ಲ ಅಂಶಗಳಿಗೆ ಹೋಲಿಸಿದರೆ ಈ ಮೌಲ್ಯವು ಬಹುಮುಖ್ಯವಾದುದು ಮತ್ತು ಇದು ಇಲ್ಲದೇ ಹೋದರೆ ಉಳಿದ ಯಾವುದೂ ಭದ್ರವಾಗಿ ಬೇರೂರಲು ಸಾಧ್ಯವಿಲ್ಲ. ಭ್ರಾತೃತ್ವವನ್ನು ಬೆಳೆಸುವ ಆಯಾಮಗಳ ವ್ಯಾಪ್ತಿ ಬಹುವಿಶಾಲವಾದುದಾಗಿದ್ದು, ವೈವಿಧ್ಯಮಯ ಹಿನ್ನೆಲೆಯುಳ್ಳ ಇತರರೊಂದಿಗೆ ಗುರುತಿಸಿಕೊಳ್ಳುವ ಮತ್ತು ತನ್ನಂತೆಯೇ ಸಮಾನವಾಗಿ ಸ್ವೀಕರಿಸುವ ಅಪೇಕ್ಷೆಯನ್ನು ಒಳಗೊಂಡಿದೆ.

ಯೋಚನೆ, ಅಭಿವ್ಯಕ್ತಿ, ನಂಬಿಕೆ, ವಿಶ್ವಾಸ ಮತ್ತು ಆರಾಧನೆಯ ಸ್ವಾತಂತ್ರ್ಯವು ಪ್ರಜೆಗಳಿಗೆ ಯೋಚಿಸುವ, ಅಭಿಪ್ರಾಯ ವ್ಯಕ್ತಪಡಿಸುವ, ಮುಕ್ತವಾಗಿ ವಾದ ಮಂಡಿಸುವ ಮತ್ತು ತನಗೆ ಸೂಕ್ತವೆಂದು ಅನಿಸಿದ ರೀತಿಯಲ್ಲಿ ವಿಶ್ವಾಸದಿಂದ ಆರಾಧಿಸುವ ಅವಕಾಶವನ್ನು ಒದಗಿಸುತ್ತದೆ.

ಇತರ ಮೌಲ್ಯಗಳು

ಜೊತೆಗೆ, ವೈವಿಧ್ಯತೆಯನ್ನು ಸ್ವೀಕರಿಸಲು ಮತ್ತು ನಂಬಿಕೆಗಳು, ಯೋಚಿಸುವ, ಚಿಂತಿಸುವ ಭಿನ್ನ ರೀತಿ, ಆರಾಧನಾ ಸ್ವರೂಪ, ಪರ್ಯಾಯ ಯೋಚನೆಗಳು ಮತ್ತು ಸ್ವರೂಪಗಳ ಬಹುತ್ವಕ್ಕೆ ಗೌರವ ನೀಡಲು ಸಾಕಷ್ಟು ತಾಳ್ಮೆ ಬೇಕಾಗುತ್ತದೆ. ವೈವಿಧ್ಯಮಯ ನಂಬಿಕೆಗಳು ಹಾಗು ಆರಾಧನಾ ಸ್ವರೂಪಗಳನ್ನು ಒಳಗೊಂಡಿರುವ ಭಾರತೀಯ ಸನ್ನಿವೇಶದಲ್ಲಿ, ಪ್ರತಿಯೊಬ್ಬರಿಗಾಗಿಯೂ ಇರುವ ಈ ಸ್ವಾತಂತ್ರ್ಯವು ಇತರರಿಗೂ ಅವಕಾಶ ನೀಡುವ ಅಂಶದೊಂದಿಗೆ ಹೆಣೆದುಕೊಂಡಿದೆ. ಆಚರಣೆಗಳಲ್ಲಿ ಮತ್ತು ನಾನಾ ನಂಬಿಕೆಗಳಂತೆ ಜನರು ಪೂಜಿಸುವುದರಿಂದ ಅವುಗಳಲ್ಲಿ ಭಾಗವಹಿಸಲು ಅಥವಾ ಆಸಕ್ತಿ ಹೊಂದಿದ ವೀಕ್ಷಕನಾಗಲು ಅರಿವು ಹಾಗು ಅವಕಾಶಗಳು ಬೇಕಾಗುತ್ತವೆ. ತನಗಾಗಿಯೇ ಇರುವ ಪ್ರಜಾಪ್ರಭುತ್ವದಲ್ಲಿ ಹಕ್ಕು ಸಾಧಿಸಲು ಇಂತಹ ಸ್ವೀಕಾರ ಪ್ರಜ್ಞೆ ಅತ್ಯಗತ್ಯ.

ತಿಳುವಳಿಕೆ ಮತ್ತು ಉದ್ದೇಶದೊಂದಿಗೆ ಪ್ರಜಾಸತ್ತಾತ್ಮಕ ಪ್ರಕ್ರಿಯೆಯಲ್ಲಿ ಭಾಗವಹಿಸಲು ಸಾಧ್ಯವಾಗುವುದು ಒಬ್ಬ ಪ್ರಜಾಸತ್ತಾತ್ಮಕ ನಾಗರಿಕನಾಗಿ ಇರುವ ಇನ್ನೊಂದು ಬಹುಮುಖ್ಯ ಅಂಶವಾಗಿದೆ. ಪ್ರಜಾಸತ್ತಾತ್ಮಕ ಪ್ರಕ್ರಿಯೆಯಲ್ಲಿ ಭಾಗವಹಿಸುವುದು ಎಂದರೆ ಅಧಿಕಾರದಲ್ಲಿರುವ ಸರ್ಕಾರವನ್ನು ಬೆಂಬಲಿಸುವುದು ಅಥವಾ ವಿರೋಧಿಸುವುದು ಮತ್ತು ಕೇವಲ ಮತ ಚಲಾಯಿಸುವುದಕ್ಕೆ ಮಾತ್ರ ಸೀಮಿತವಾದುದು ಎಂಬುದು ಖಂಡಿತವಾಗಿಯೂ ಅಲ್ಲ. ಅಂದರೆ ಪ್ರಸಕ್ತ ವಿದ್ಯಮಾನಗಳ ಬಗ್ಗೆ ತಿಳಿದುಕೊಳ್ಳುವುದು, ವಿಶ್ಲೇಷಿಸುವುದು, ಸರ್ಕಾರದ ಮತ್ತು ಆಡಳಿತದ ಕೆಲಸಗಳ ಮೌಲ್ಯಮಾಪನ ಹಾಗು ತುಲನೆ ಮಾಡುವುದು, ಅವರು ಕೈಗೊಂಡಿರುವ ಕ್ರಮಗಳು ಮತ್ತು ನಿರ್ಧಾರಗಳಿಗೆ ಸೂಕ್ತ ಸಮಜಾಯಿಷಿ ಪಡೆಯುವುದು ಮತ್ತು ಪ್ರಶ್ನಿಸುವುದು ಸೇರಿರುತ್ತದೆ. ಒಬ್ಬ ಉತ್ತಮ ಪ್ರಜೆಯಾಗಿರುವುದು ಎಂದರೆ ಅಧಿಕಾರದಲ್ಲಿರುವವರಿಗೆ ವಿಧೇಯರಾಗಿರುವುದು ಎಂದಲ್ಲ, ಬದಲಾಗಿ ಆಕೆ ತನ್ನ ಜೀವನಕ್ಕೆ ಮಾತ್ರವಲ್ಲ, ಇತರರ ಜೀವನದ ಬಗ್ಗೆಯೂ ಒಳಿತನ್ನು ಬಯಸುವ ತಿಳುವಳಿಕೆಯನ್ನು ಹೊಂದಿರುವ ಪ್ರಜೆಯಾಗಿರಬೇಕು. ಪ್ರಜಾಪ್ರಭುತ್ವದಲ್ಲಿ ಒಬ್ಬ ಶಿಕ್ಷಿತ ಪ್ರಜೆ ಎಂದರೆ:

- ಮಾಹಿತಿಯನ್ನು ಪಡೆದುಕೊಳ್ಳುವ ಮತ್ತು ವಿವೇಚನೆಯಿಂದ ತೀರ್ಮಾನಿಸುವ ಸಾಮರ್ಥ್ಯವನ್ನು ಹೊಂದಿರುವುದು.
- ಪುರಾವೆಗಳು, ದೃಷ್ಟಿಕೋನಗಳು, ಅಭಿಪ್ರಾಯಗಳು, ವಿಶ್ಲೇಷಣೆಗಳು, ಪ್ರತಿಪಾದನೆಗಳನ್ನು ಪಡೆದುಕೊಂಡು ಅದರ ಮೌಲ್ಯಮಾಪನ ಮಾಡುವುದು.
- ತರ್ಕಬದ್ಧವಾಗಿರುವುದನ್ನು ಮತ್ತು ವೈಚಾರಿಕವಾದುದನ್ನು ತಿಳಿದುಕೊಳ್ಳುವುದು.

ಮೇಲೆ ಪ್ರಸ್ತಾಪಿಸಿದ ಮೂರು ಸಂಗತಿಗಳು ಮಾತ್ರ ಸರ್ಕಾರ ಮತ್ತು ಆಡಳಿತ ನಡೆಸುವವರಂತೆಯೇ ನಾವು ಕೂಡ ಸಮಾನರು ಎಂಬ ವಿಶ್ವಾಸವನ್ನು ಮತ್ತು ನಾಗರಿಕನಾಗಿ ಒಬ್ಬನ ಪಾತ್ರದ ಮಹತ್ವವನ್ನು ಅರಿಯುವ ಸಾಮರ್ಥ್ಯವನ್ನು ಹುಟ್ಟುಹಾಕಬಹುದು. ಬದಲಾಗಿ ಅಧಿಕಾರಸ್ಥರನ್ನು ಒಂದು ಊಳಿಗಮಾನ್ಯ ಪದ್ಧತಿಯಲ್ಲಿನ ವ್ಯಕ್ತಿಯಂತೆ ಸುಮ್ಮನೆ ಒಪ್ಪಿಕೊಂಡು ಪರವಶವಾಗಬೇಕಾಗಿಲ್ಲ.

ದೇಶಭಕ್ತಿ

ದೇಶದ ಬಗ್ಗೆ ಕಾಳಜಿ ಮತ್ತು ಸಾಮಾಜಿಕ ಕಳಕಳ ಹೊಂದಿರುವುದು ಒಬ್ಬ ನಾಗರಿಕನಾಗಿ ಬಹುಮುಖ್ಯ ಅಂಶವಾಗಿದೆ. ಆದರೆ, ದೇಶಭಕ್ತನಾಗಿರುವುದು ಮತ್ತು ನಾಗರಿಕನಾಗಿ ಜವಾಬ್ದಾರಿಯಿಂದ ವರ್ತಿಸುವುದು ಎಂಬುದನ್ನು ಪರಾಮರ್ಶೆಗೆ ಒಳಪಡಿಸ-ಬೇಕಾಗುತ್ತದೆ. ರಾಷ್ಟ್ರದ ಕಲ್ಪನೆಯನ್ನು, ದೇಶಭಕ್ತಿಯ ಅರ್ಥವನ್ನು ಮತ್ತು ಅದು ಏನು ಮತ್ತು ಯಾಕೆ ಎನ್ನುವುದನ್ನು ಪ್ರಶ್ನಿಸುವುದು ಅತ್ಯಗತ್ಯ. ಪ್ರಶ್ನೆಗಳನ್ನು ಕೇಳುವುದು ಮತ್ತು ಸರ್ಕಾರದ ಅಥವಾ ಆಡಳಿತಾತ್ಮಕ ಕ್ರಮಗಳ ಬಗ್ಗೆ ಸಹಮತ ಇಲ್ಲದೇ ಇರುವುದು ಎಂದರೆ ದೇಶಪ್ರೇಮವಿಲ್ಲದೇ ಇರುವುದು ಎಚಿದಲ್ಲ.

ಈ ದೇಶವನ್ನು ರಚಿಸುವುದು ಇಲ್ಲಿನ ಜನರೇ ಎಂಬುದನ್ನು ನಾಗರಿಕರು ಗುರುತಿಸಿ ಈ ತಿಳುವಳಿಕೆಯೊಂದಿಗೆ ಮತ್ತು ಮಾನ್ಯತೆಯೊಂದಿಗೆ ವರ್ತಿಸಬೇಕಾಗುತ್ತದೆ. ತನ್ನ ಜನರ ಬಗ್ಗೆ ಯಾವುದೇ ಕಳಕಳ ಇಲ್ಲದೆ ಮತ್ತು ರಾಷ್ಟ್ರೀಯತೆಯ ಅಮೂರ್ತ ಚಿಂತನೆಗೆ, ಅಂತ್ಯವಿಲ್ಲದ ತ್ಯಾಗಕ್ಕೆ ಒತ್ತಾಯಿಸುವ ದೇಶದ ಯಾವುದೇ ಚಿಂತನೆಯು ಪ್ರಜಾಸತ್ತಾತ್ಮಕವಲ್ಲದ ಸೂತ್ರೀ-ಕರಣವಾಗುತ್ತದೆ. ಒಬ್ಬ ವ್ಯಕ್ತಿ ಇತರ ವ್ಯಕ್ತಿಗಳು, ಸಮುದಾಯಗಳು ಮತ್ತು ದೇಶಗಳು ಆದರಿಸುವ ಹೆಮ್ಮೆಯ ಸಂಗತಿಗಳನ್ನು ಗೌರವದಿಂದ ಕಂಡರೆ ಮಾತ್ರ ತನ್ನ ಬಗ್ಗೆ ಮತ್ತು ದೇಶದ ಬಗ್ಗೆ ಹೊಂದಿರುವ ಹೆಮ್ಮೆಯನ್ನು ನಿಜವಾದದು ಎಂದು ನಿರ್ಣಯಿಸಬೇಕು.

ಕಳೆದುಹೋದ ಕಾಲದ ತಪ್ಪುಗಳನ್ನು ಗುರುತಿಸಲು ಮಾತ್ರ ನಮಗೆ ಸಹಾಯ ಮಾಡುತ್ತದೆಯೇ ಹೊರತು ಅದು ನಮ್ಮ ಇಂದಿನ ಬದುಕನ್ನು ಉತ್ತಮಗೊಳಿಸುವುದಿಲ್ಲ ಎಂಬ ಅಂಶವನ್ನು ನಾವು ಸದಾ ಮನಗಾಣಬೇಕಾದ ಅಗತ್ಯವಿದೆ. ಗತಿಸಿದ ಕಾಲದ ತಪ್ಪುಗಳನ್ನು ಇಂದಿನ ಸನ್ನಿವೇಶದಲ್ಲಿಟ್ಟು ಸಾರ್ವಭೌಮ ಗಣರಾಜ್ಯದ ಚಿಂತನೆಯನ್ನು ಪರಿಶೀಲಿಸಬೇಕಾದ ಮತ್ತು ಒಂದು ರಾಷ್ಟ್ರದ ಏಕತೆ ಹಾಗು ಸಮಗ್ರತೆ ಎಂದರೆ ಏನು ಎಂಬುದನ್ನು ಖಚಿತಪಡಿಸಿ-ಕೊಳ್ಳಬೇಕಾದ ಅಗತ್ಯವಿದೆ. ಇದು ಜನರಿಗೆ ಮತ್ತು ಎಲ್ಲ ವೈವಿಧ್ಯತೆಗೆ ಗೌರವ ಸಲ್ಲಿಸದಿರುವುದೇ? ಅಂದರೆ ಏಕಮುಖೀ ಯೋಚನೆ ಮತ್ತು ಏಕ ನಂಬಿಕೆಯನ್ನು ಒಳಗೊಂಡ ಏಕರೂಪತೆ ಮತ್ತು ಅಧಿಪತ್ಯವನ್ನೂ ಸಾಧಿಸುವುದರ ಕಡೆಗೆ ಕ್ರಮಿಸುವುದು ಎಂದು ಅರ್ಥವೇ? ಅಂದರೆ ಇದು ಇತರ ಸಮುದಾಯಗಳು ಅಥವಾ ವ್ಯಕ್ತಿಗಳ ವಿರುದ್ಧ ಭಯ ಮತ್ತು ಕ್ರೋಧದ ಬೀಜಗಳನ್ನು ಬಿತ್ತುವುದು ಎಂದು ಅರ್ಥವೇ? ಇದು ಕೇವಲ ಭೌತಿಕ ಭೂಮಿ ಮತ್ತು ಭೌಗೋಳಿಕ ವಿವರಣೆಗೆ ಮಾತ್ರ ಸಂಬಂಧಿಸಿದ್ದಲ್ಲವಾದ್ದರಿಂದ ಇದು ಈ ದೇಶದಲ್ಲಿ ಬೀಡುಬಿಟ್ಟಿರುವ ಜನರ ಬಗ್ಗೆಯೂ ಕಳಕಳಿಯನ್ನು ಹೊಂದಿರಬೇಕು. ಆ ಬಗ್ಗೆ ಮತ್ತು ಅಮೂರ್ತರೂಪದ ರಾಷ್ಟ್ರದ ಮೇಲೆ ಹೆಚ್ಚಿನ ಒತ್ತು ನೀಡುವುದು, ಕಳೆದುಹೋದ ಕಾಲದ ಕಡೆಗೆ ಹಿನ್ನೋಟ, ಅತಿಯಾದ ರಾಷ್ಟ್ರವಾದಿಯಾಗಿರುವುದು, ಸಂಕುಚಿತ ಮನೋಭಾವವನ್ನು ಹೊಂದಿರುವುದು ಮತ್ತು ಒಳಗೊಳ್ಳದೇ ಇರುವುದು – ಇವೆಲ್ಲವೂ ಸಂವಿಧಾನದಲ್ಲಿ ಕಲ್ಪಿಸಲಾಗಿರುವಂತೆ ಭಾರತೀಯನಾಗಿರುವುದರ ಆಲೋಚನೆಯನ್ನೇ ಅಗೌರವಿಸಿದಂತೆ.

ಶಾಲೆಯ ಪಾತ್ರ

ಶಾಲಾ ಶಿಕ್ಷಣದ ಪ್ರಕ್ರಿಯೆಯು ಈ ನಿಟ್ಟಿನಲ್ಲಿ ಕೊಡುಗೆಯನ್ನು ನೀಡಬಹುದು ಎನ್ನುವುದು ಈ ಯೋಚನೆಯ ಉದ್ದೇಶ. ಶಾಲೆಯಲ್ಲಿ ಎಲ್ಲರಲ್ಲೂ ಸಹಭಾಗಿತ್ವ ಮತ್ತು ಸಹಯೋಗದ ಸಂಸ್ಕೃತಿಯನ್ನು ಅಭಿವೃದ್ಧಿಪಡಿಸುವ ಮೂಲಕ; ವಿವಿಧ ರೀತಿಯ ಜಂಟಿ ಕಾರ್ಯಗಳು ಮತ್ತು ಚಟುವಟಿಕೆಗಳನ್ನು ಹಂಚಿಕೊಳ್ಳುವುದರೊಂದಿಗೆ ಇದನ್ನು ಸಾಧ್ಯವಾಗಿಸಬಹುದು; ಶಾಲಾ ನಿರ್ವಹಣೆ ಮತ್ತು ಶಾಲೆಯನ್ನು ನಡೆಸುವ ಕೆಲಸಕ್ಕೆ ಕೊಡುಗೆಯನ್ನು ನೀಡಲು ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಪರಸ್ಪರ ಪಾತ್ರಗಳನ್ನು ವಹಿಸಿಕೊಳ್ಳುವ ಸಂಸ್ಕೃತಿಯನ್ನು ಅನುಸರಿಸುವ ಮೂಲಕವೂ ಮಾಡಬಹುದು. ಇದರಿಂದ ಗುಂಪುಗಳಿಗೆ ಜವಾಬ್ದಾರಿಯನ್ನು ನೀಡಿದಂತಾಗುತ್ತದೆ. ನಾನಾ ಕಾರ್ಯನಿಯೋಜನೆಗಳನ್ನು ಗುಂಪುಗಳಲ್ಲಿ ಹಂಚಿಕೊಂಡು ಯೋಜನೆಯ ಚೌಕಟ್ಟಿನಲ್ಲಿಯೇ ಆಲೋಚನೆಗಳನ್ನು ರೂಪಿಸುವ ಮತ್ತು ಕಾರ್ಯರೂಪಕ್ಕೆ ತರುವಂತೆ ಮಾಡುತ್ತದೆ.

ಗುಂಪುಗಳ ಸಮನ್ವಯದ ಕೆಲಸಗಳನ್ನು ನಾನಾ ರೀತಿಯಲ್ಲಿ ವಿಂಗಡಿಸಬಹುದಾಗಿದೆ; ಉಪಕರಣಗಳ ನಿರ್ವಹಣೆ, ತರಗತಿಗಳು ಮತ್ತು ಶಾಲಾ ಆವರಣಗಳನ್ನು ಸ್ವಚ್ಛವಾಗಿರುವಂತೆ ಖಾತರಿ ಪಡಿಸುವುದು, ಮೈದಾನಗಳು ಮತ್ತು ಗಿಡಗಳನ್ನು ನಿರ್ವಹಣೆ ಮಾಡುವುದು, ಹಾಜರಾತಿಯನ್ನು ದೃಢೀಕರಿಸಲು ಸಹಾಯ ಮಾಡುವುದು, ಸಹಾಯದ ಅಗತ್ಯವಿರುವ ಮಕ್ಕಳಿಗೆ ಬೆಂಬಲವಾಗಿ ನಿಲ್ಲುವುದು ಇತ್ಯಾದಿ. ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ಶಾಲೆಯ ಸುಗಮ ಕಾರ್ಯನಿರ್ವಹಣೆಗೆ ಬೇಕಾಗಿರುವುದು ಸಹಭಾಗಿತ್ವದ ಜವಾಬ್ದಾರಿ ವ್ಯವಸ್ಥೆ ಮತ್ತು ಸಂಸ್ಕೃತಿಯನ್ನು ಕಾರ್ಯರೂಪಕ್ಕೆ ತರುವುದು. ಜೊತೆಗೆ ವೇಳಾಪಟ್ಟಿ, ಶಾಲಾ ಚಟುವಟಿಕೆಗಳು, ಕಾರ್ಯಕ್ರಮಗಳು ಮತ್ತು ಇತರೆ ವಿಷಯಗಳಲ್ಲಿ ನಿರ್ಧಾರಗಳನ್ನು ಕೈಗೊಳ್ಳುವ ಕಾರ್ಯದಲ್ಲಿ ಭಾಗಿಯಾಗುವುದು ಕೂಡ ಇದರಲ್ಲಿ ಸೇರಿರಬಹುದು. ಒಟ್ಟಾರೆ ಸ್ವರೂಪದ ಚೌಕಟ್ಟಿನ ಒಳಗೇ ನಡೆಸುವ ಇಂತಹ ಕಾರ್ಯಗಳು, ವಿದ್ಯಾರ್ಥಿಗಳು ಸಹಯೋಗದಿಂದ ಮಾಡುವ ಕೆಲಸದ ಬಗ್ಗೆ ಪ್ರಜ್ಞೆಯನ್ನು ಬೆಳೆಸಿಕೊಳ್ಳಲು ಮತ್ತು ಅವರಿಗೆ ತಮ್ಮದೇ ಆದ ಸ್ವಂತ ಅಭಿಪ್ರಾಯವಿದ್ದಾಗಲೂ ಬಹುಮತದ ನಿರ್ಧಾರವನ್ನು ಒಪ್ಪಿಕೊಳ್ಳುವುದು ಮತ್ತು ಟೀಕೆ ಹಾಗು ಸಲಹೆಗಳನ್ನು ಧನಾತ್ಮಕವಾಗಿ ಸ್ವೀಕರಿಸಲು ಮುಕ್ತವಾದ ಮನಸ್ಸಿನೊಂದಿಗೆ ಪರಾಮರ್ಶೆ ಮತ್ತು ಯೋಜನೆಯಲ್ಲಿ ಭಾಗಿಯಾಗಲು ಸಹಾಯವಾಗುತ್ತದೆ. ಇವೆಲ್ಲದರಿಂದ ಮಾತುಕತೆಗೆ, ಚರ್ಚೆಗೆ ಒಂದು ವೇದಿಕೆಯನ್ನು ಕಲ್ಪಿಸಿದಂತಾಗುತ್ತದೆ ಮತ್ತು ಇಂತಹ ವೇದಿಕೆಯಲ್ಲಿ ಶಾಲಾ ನಿರ್ಧಾರಗಳ ಬಗ್ಗೆ ವಿದ್ಯಾರ್ಥಿಗಳು ಪ್ರಶ್ನೆಗಳನ್ನು ಕೂಡ ಕೇಳುವ ಅವಕಾಶ ಒದಗುತ್ತದೆ.

ಸಾಮಾನ್ಯ ಶಾಲೆಗಳ ಕಲ್ಪನೆಗೆ ಅತ್ಯಂತ ನಿಕಟವಾಗಿರುವವು ಎಂದರೆ ಸರ್ಕಾರಿ ಶಾಲೆಗಳು. ಯಾಕೆಂದರೆ ಅವು ವಿಭಿನ್ನವಾದ ಹಿನ್ನೆಲೆಯಿಂದ ಬಂದ ಮಕ್ಕಳ ಶಿಕ್ಷಣಕ್ಕೆ ಒದಗಿಸುವ ಸಾಮರ್ಥ್ಯವನ್ನು ಹೊಂದಿರುತ್ತವೆ. ಶಾಲೆಯಲ್ಲಿ ಅವರು ಆಟದಲ್ಲಿ ಜೊತೆಯಾಗಬಲ್ಲರು, ಒಬ್ಬರಿಗೊಬ್ಬರು ಪರಸ್ಪರ ಮಾತನಾಡಬಲ್ಲರು, ಇನ್ನೊಬ್ಬಳ/ನ ಮಾತಿಗೆ ಕಿವಿಯಾಗಬಲ್ಲರು, ಜೊತೆಜೊತೆಗೆ ತಿಂಡಿ ಮತ್ತು ಊಟವನ್ನು ಹಂಚಿಕೊಳ್ಳಬಲ್ಲರು. ಅವರು ಪರಸ್ಪರ ತಮ್ಮ ನಡವಳಿಕೆ ಹೇಗಿರಬೇಕು ಎಂಬುದನ್ನು ಕಲಿಯುತ್ತಾರೆ, ಭಾಷೆ, ಯೋಚನೆಗಳು ಮತ್ತು ಆಟಗಳನ್ನು ಕಲಿಯುತ್ತಾರೆ. ಶಾಲೆಯ ವಾತಾವರಣದಲ್ಲಿ ಬಹುತ್ವದ ಆಚರಣೆಗಳಲ್ಲಿ ಭಾಗಿಯಾಗುವುದರ ಅಥವಾ ಅವಲೋಕಿಸುವುದರ ಮೂಲಕ ಕೆಲವು ವರ್ಗದ ಜನರಿಗೆ ಕಳಂಕ ಹಚ್ಚುವ ರೀತಿಯಲ್ಲಿ ತಪ್ಪು ಮಾಹಿತಿಯ ಪ್ರಚಾರ ನಡೆಸುತ್ತಿರುವುದಕ್ಕೆ ಪ್ರತಿರೋಧವನ್ನು ಬೆಳೆಸಿಕೊಳ್ಳಬಲ್ಲರು. ವಿರಾಮದ ಸಮಯದಲ್ಲಿ ಅಥವಾ ಮಧ್ಯಾಹ್ನದ ಊಟದ ಸಮಯದಲ್ಲಿ ಜೊತೆಯಾಗಿ ಕುಳಿತುಕೊಂಡು ಪರಸ್ಪರ ತಿಂಡಿ ತಿನಿಸುಗಳನ್ನು ಹಂಚಿಕೊಳ್ಳುವುದರ ಮೂಲಕ ಅವರ ನಡುವಿನ ಅನೇಕ ಗೋಡೆಗಳನ್ನು ಕೆಡವಿ ಹಾಕಬಹುದಾಗಿದೆ.

ಆದರೆ ಇವೆಲ್ಲವೂ, – ಶಾಲೆಯು ಭ್ರಾತೃತ್ವವನ್ನು ಗೌರವಿಸುವುದರಿಂದ ಮತ್ತು ವಿದ್ಯಾರ್ಥಿಗಳ ನಡುವೆ ತಾರತಮ್ಯ ಸುಳಿಯದಂತೆ ಮಾಡುವುದರಿಂದ, ಮತ್ತು ಅವರು ಯಾವುದೇ ಜಾತಿ, ಸಮುದಾಯ, ಕುಟುಂಬದ ವೃತ್ತಿ ಮತ್ತು ಹಣಕಾಸಿನ ಸ್ಥಾನಮಾನಗಳ ಗಡಿಯನ್ನು ಮೀರಿ ಮಿತ್ರರನ್ನು, ಸಹಪಾಠಿಗಳನ್ನು, ತಂಡದ ಸದಸ್ಯರನ್ನು ಸೇರಿಸಿಕೊಳ್ಳುವಂತೆ ಉತ್ತೇಜನ ನೀಡುವುದರಿಂದ ಮಾತ್ರ ಸಾಧ್ಯವಾಗುವುದು. ವಿದ್ಯಾರ್ಥಿಗಳು ಒಂದು ತಂಡವಾಗಿ ಆಟವಾಡುವುದು, ಗೆಲ್ಲುವುದು ಮತ್ತು ಸೋಲುವುದನ್ನು ಕಲಿತು, ಫಲಿತಾಂಶ ಯಾವುದೇ ಇರಲಿ ಅದನ್ನು ಸ್ವೀಕರಿಸುವುದು, ಸಾಂಸ್ಕೃತಿಕ ಮತ್ತು ಇತರ ಚಟುವಟಿಕೆಗಳಲ್ಲಿ ಪರಸ್ಪರ ಒಂದಾಗುವುದು ಮತ್ತು ಶಾಲೆಗಾಗಿ ಅನೇಕ ಸವಾಲುಗಳನ್ನು ಗಟ್ಟಿಯಾಗಿ ಎದುರಿಸುವುದನ್ನು ಅರ್ಥ ಮಾಡಿಕೊಳ್ಳುವಂತಹ ಕಾರ್ಯಯೋಜನೆ ಕಲ್ಪಿಸುವುದು ಕೂಡ ಇವೆಲ್ಲದರಲ್ಲಿ ಒಳಗೊಂಡಿದೆ.

ವಿದ್ಯಾರ್ಥಿಗಳಲ್ಲಿ ನ್ಯಾಯಯುತ ಆಲೋಚನೆಗಳನ್ನು ಬೆಳೆಸಲು ಅವರೊಂದಿಗೆ ಪಾರದರ್ಶಕತೆಯಿಂದ ಇದ್ದು ವಸ್ತುನಿಷ್ಠ ಪ್ರತಿಕ್ರಿಯೆಗಳನ್ನು ನೀಡುವುದು ಅತ್ಯವಶ್ಯಕವಾಗಿದೆ.

ಒಂದು ಶಾಲೆಯ ಆಂತರಿಕ ಕಾರ್ಯನಿರ್ವಹಣೆ ಮತ್ತು ಚಟುವಟಿಕೆಗಳು – ಉದಾಹರಣೆಗೆ, ಜೊತೆಯಾಗಿ ಕೆಲಸ ಮಾಡುವ ಅನುಭವವನ್ನು ಒದಗಿಸುವುದು, ಪಾರದರ್ಶಕವಾದ ರೀತಿಯಲ್ಲಿ ಎಲ್ಲರನ್ನೂ ನೋಡುವುದು ಮತ್ತು ಮಿಶ್ರ ಗುಂಪುಗಳನ್ನು ಒಳಗೊಳ್ಳುವುದನ್ನು ಖಾತ್ರಿಗೊಳಿಸುವುದು ಇತ್ಯಾದಿ – ಸೂಕ್ಷ್ಮ ನೆಲೆಯಲ್ಲಿರುವ ವೈವಿಧ್ಯತೆಯನ್ನು ಒಪ್ಪಿಕೊಳ್ಳುವ ಮನೋ–ಭೂಮಿಕೆಗೆ ಮಕ್ಕಳನ್ನು ಸಿದ್ಧಗೊಳಿಸುವುದು ಅತ್ಯಂತ ಮುಖ್ಯವಾದುದು ಮತ್ತು ವಿಶಾಲ ಸಮಾಜದಲ್ಲಿ ಹಾಗು ಅದರ ಸವಾಲುಗಳೊಂದಿಗೆ ಮುಖಾಮುಖಿಯಾಗಲು ಬೇಕಾದ ಸಿದ್ಧತೆ ಕೂಡ ಹೌದು. ಈ ಸಿದ್ಧತೆಯು ವಿಶಾಲ ಸಮಾಜದ ಮೇಲೆ ಪರಿಣಾಮವನ್ನು ಬೀರುವ ಕಳಕಳಿಯ ವಿಷಯಗಳೊಂದಿಗೆ ತೊಡಗಿಕೊಳ್ಳುವಂತಿರಬೇಕು. ಚರ್ಚೆಯ ಮೂಲಕ ಇತರರಿಗೆ, ಅಪರಿಚಿತರಿಗೆ, ಭೇಟಿ ಮಾಡದವರು ಮತ್ತು ಅವರ ಸವಾಲುಗಳ ಬಗ್ಗೆ ಕಳಕಳಿ, ಪ್ರಚಲಿತ ವಿದ್ಯಮಾನಗಳ ಬಗ್ಗೆ ಅರಿವು ಹೊಂದಿ, ವಿಭಜಕ ವಿಚಾರಗಳ ಸುತ್ತ ಆಕರ್ಷಿತರಾಗಿ ಪ್ರಲೋಭನೆಗೆ ಒಳಗಾಗುವುದನ್ನು ತಡೆಯುವುದು ಮತ್ತು ಅದನ್ನು ಪ್ರತಿರೋಧಿಸುವುದು, ಅನಾವರಣ–ಗೊಳ್ಳುತ್ತಿರುವ ದೊಡ್ಡ ಬಿಕ್ಕಟ್ಟುಗಳಿಗೆ ಕಳಕಳಿಯಿಂದ ಪ್ರತಿಕ್ರಿಯೆ ನೀಡುವುದು (ಇತ್ತೀಚಿನ ಸಾಂಕ್ರಾಮಿಕ ರೋಗದ ಸಂದರ್ಭದಲ್ಲಿ ಜನರ ಮಹಾ ವಲಸೆಯಂತಹ ಸಂದರ್ಭದಲ್ಲಿ), ಪರಿಸರವನ್ನು ಸಂರಕ್ಷಿಸುವ ಜವಾಬ್ದಾರಿಯುತ ಮಾರ್ಗಗಳನ್ನು ಉತ್ತೇಜಿಸುವುದು, ಭೂ ಅವನತಿಯನ್ನು ತಡೆಯುವುದು, ಸುಸ್ಥಿರ ಸಾಮಗ್ರಿಗಳು, ಉತ್ಪನ್ನಗಳು, ವಿಧಾನಗಳ ಬಳಕೆಗೆ ಒತ್ತಾಯಿಸುವುದು ಮತ್ತು ಕೊಳ್ಳುಬಾಕ ಸಂಸ್ಕೃತಿಯನ್ನು ತಡೆಯುವುದು. ಮೇಲೆ ಪ್ರಸ್ತಾಪಿಸಿದ ಎಲ್ಲವೂ ಸಮುದಾಯದ ಯೋಜನೆಗಳಲ್ಲಿ ಭಾಗವಹಿಸುವುದರ ಮೂಲಕ ಸಾಮಾಜಿಕ ಜವಾಬ್ದಾರಿಗಳ ಬಗ್ಗೆ ಅರಿವನ್ನು ಬೆಳೆಸಿಕೊಂಡು ಒಂದಲ್ಲ ಒಂದು ವಿಧದಲ್ಲಿ ಪ್ರತಿಕ್ರಿಯಿಸುವ ಮಾರ್ಗಗಳಾಗಿವೆ.

ಒಟ್ಟು ಸಾರಾಂಶ

ಇವುಗಳಲ್ಲಿ ಬಹಳಷ್ಟನ್ನು ಶಾಲೆಗಳು ಜಾರಿಗೆ ತರುವುದು ಸುಲಭದ ಮಾತಲ್ಲ. ಆದರೆ ಎಲ್ಲರ ಮಟ್ಟವನ್ನೂ ಮೇಲಕ್ಕೇರಿಸಿ ಇಂತಹ ಒಂದು ಪೂರಕ ವಾತಾವರಣವನ್ನು ಸಾಧ್ಯವಾಗಿಸುವ ಪ್ರಯತ್ನವಂತೂ ಮಾಡಬಹುದು. ವಿಶಾಲ ನೆಲೆಯ ಎಲ್ಲ ಹಂತಗಳಲ್ಲಿಯೂ ಮಕ್ಕಳಲ್ಲಿ ಅರಿವು ಮೂಡಿಸುವಂತಹ ಮತ್ತು ಪ್ರಯತ್ನ ಮಾಡಬಹುದಾದ ನಿಟ್ಟಿನಲ್ಲಿ ಶಾಲೆಗಳು ಚರ್ಚೆಯನ್ನು ಆರಂಭಿಸಬಹುದಾಗಿದೆ. ಇದರ ಜೊತೆಗೆ ಶಾಲೆಯಿಂದ ಆಚೆಗೆ ಮತ್ತು ಸಮುದಾಯದಲ್ಲಿ ಕೆಲವು ಕ್ರಮಗಳನ್ನು ಕೈಗೊಳ್ಳುವುದು ಸಾಮಾಜಿಕವಾಗಿ ಜವಾಬ್ದಾರಿಯ ಹಾಗು ಉತ್ತಮ ನಾಗರಿಕನ ದ್ಯೋತಕವಾಗಿದೆ; ತಂಡಗಳು ಮತ್ತು ಗುಂಪುಗಳಲ್ಲಿ ಜಾತ್ಯತೀತ ಸಹಭಾಗಿತ್ವ, ಸಾರ್ವತ್ರಿಕವಾಗಿ ಭ್ರಾತೃತ್ವದ ಭಾವನೆಯನ್ನು ಖಾತ್ರಿಗೊಳಿಸುವುದಕ್ಕಾಗಿ ಪಂಥ–ರಹಿತ ಗೆಳೆತನವನ್ನು ರೂಪಿಸುವುದು ಮುಖ್ಯವಾಗುತ್ತದೆ. ಮಕ್ಕಳು ಕೂಡ ತಂಡದ ಆಟಗಳು, ಶಾಲಾ ಕಾರ್ಯಗಳಲ್ಲಿ ಜಂಟಿಯಾಗಿ ಜವಾಬ್ದಾರಿಗಳನ್ನು ವಹಿಸಿಕೊಳ್ಳುವುದು, ಶಾಲೆಯಲ್ಲಿ ಸಣ್ಣ ಹಾಗು ದೊಡ್ಡ ಕಾರ್ಯಕ್ರಮಗಳನ್ನು ಏರ್ಪಡಿಸುವುದು, ವಿವಿಧ ಅಗತ್ಯಗಳ ಮೂಲಕ ಪರಸ್ಪರ ಒಬ್ಬರಿಗೊಬ್ಬರು ಸಹಾಯ ಮಾಡುವುದು ಇತ್ಯಾದಿ ಕೆಲಸಗಳನ್ನು ಮಾಡಬೇಕಾದ ಅಗತ್ಯವಿರುತ್ತದೆ.

ಇವೆಲ್ಲದರ ಹೊರತಾಗಿಯೂ ಮಕ್ಕಳು, ಓದುವುದರ ಮೂಲಕ ಮತ್ತು ಇತರ ಮೂಲಗಳಿಂದ ಹೊಸ ಜ್ಞಾನವನ್ನು ವಿಶ್ವಾಸದಿಂದ ಪಡೆದುಕೊಳ್ಳುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಲು; ತರ್ಕಬದ್ಧವಾಗಿ ಮತ್ತು ಸ್ಪಷ್ಟತೆಯಿಂದ ಅಭಿಪ್ರಾಯವನ್ನು ವ್ಯಕ್ತಪಡಿಸುವುದು, ತಮ್ಮ ಬಗ್ಗೆ ಧನಾತ್ಮಕವಾದ ಚಿತ್ರವನ್ನು ಹೊಂದಿರಲು; ಅತ್ಯಂತ ಬಲವಾದ ನೈತಿಕ ನೆಲೆಯನ್ನು ಹೊಂದಿರಲು ಮತ್ತು ನಿರ್ಭೀತನಾಗಿರಲು ಪೌರತ್ವದ ತರಬೇತಿಯ ಅಗತ್ಯವಿದೆ. ಪೌರತ್ವ ಎಂದರೆ ಪ್ರತಿಯೊಬ್ಬ ಕಲಿಕಾರ್ಥಿಯೂ ಕೂಡ ತನ್ನ ಪ್ರಾಮುಖ್ಯತೆಯ ಬಗ್ಗೆ ವಿಶ್ವಾಸದಿಂದಿ–ರುವುದು ಮತ್ತು ಆಕೆಯ ಪಾತ್ರದ ಬಗ್ಗೆ ಜವಾಬ್ದಾರಿಯುತಳಾಗಿ ವರ್ತಿಸುವುದು.

ಶಾಲೆಗಳು ಇದನ್ನು ಸಾಧ್ಯವಾಗಿಸುವುದು ಬದ್ಧತೆಯಿಂದ ಕೂಡಿದ ತಂಡವನ್ನು ಅವಲಂಬಿಸಿದೆ. ಈ ತಂಡದಲ್ಲಿ ಕೇವಲ ಶಿಕ್ಷಕರು ಮಾತ್ರವಲ್ಲದೆ ಇಡೀ ಶಾಲೆಯ ಸಿಬ್ಬಂದಿ ಸಕ್ರಿಯವಾಗಿರ–ಬೇಕಾಗುತ್ತದೆ. ಜೊತೆಗೆ ಈ ತಂಡಕ್ಕೆ ಸುರಕ್ಷಿತ ಭಾವನೆ ಬರುವಂತೆ ಮಾಡುವ, ಸ್ವಯಂ ಭರವಸೆಯ ಹಾಗು ಪೌರತ್ವದ ಪ್ರಜ್ಞೆಯನ್ನು ಮೂಡಿಸುವ ವಾತಾವರಣವನ್ನು ರೂಪಿಸಬೇಕಾಗುತ್ತದೆ. ಪೋಷಕರು ಸೇರಿದಂತೆ ಬಾಹ್ಯ ಪ್ರಪಂಚದ ಜೊತೆ ಮಾತುಕತೆ ನಡೆಸಲು ಅವರು ಆತ್ಮವಿಶ್ವಾಸವನ್ನು ಪಡೆಯಬೇಕು. ಇಂತಹ

ಮಾತುಕತೆಗಳು ಸದಾ ಮೇಲೆ ವಿವರಿಸಿದ ಮೌಲ್ಯಗಳಿಗೆ ತಕ್ಕುದಾಗಿ ಸೌಹಾರ್ದಯುತವಾಗಿಯೇ ಇರಲಾರದು ಎಂಬ ಅರಿವೂ ಅವರಿಗಿರಬೇಕು. ಇದಕ್ಕಾಗಿ ಅವರು ಪೌರತ್ವವನ್ನು ಅರ್ಥ ಮಾಡಿಕೊಳ್ಳುವ ಅಗತ್ಯವಿರುತ್ತದೆ, ಶಾಲೆಯ ಸಮಾಜೋ ಸಾಂಸ್ಕೃತಿಕ ವಾತಾವರಣದಲ್ಲಿ ಯಾವಯಾವ ಅಂಶಗಳನ್ನು ಸಾಕಾರಗೊಳಿಸಬಲ್ಲೆವು ಎಂದು ಅರಿಯುವ ಸಾಮರ್ಥ್ಯವನ್ನು ಹೊಂದಿರಬೇಕು ಮತ್ತು ಮುಕ್ತವಾದ ಹಾಗು ಔಚಿತ್ಯಪೂರ್ಣ ಚರ್ಚೆಗೆ ಅವಕಾಶವನ್ನು ನೀಡಲು ತಮ್ಮದೇ ಆದ ಪೂರ್ವಗ್ರಹಗಳು ಮತ್ತು ನಿಷ್ಠೆಗಳನ್ನು ಬದಿಗಿರಿಸಲು ಸಾಧ್ಯವಾಗ–ಬೇಕು. ಇದರಿಂದ ಮಕ್ಕಳು ಮಾನವೀಯ ಮತ್ತು ಸಾಂವಿಧಾನಿಕ ಮೌಲ್ಯಗಳಿಂದ ತುಂಬಿದ ತಮ್ಮದೇ ಆದ ತರ್ಕಬದ್ಧ ಅಭಿಪ್ರಾಯಗಳನ್ನು ರೂಪಿಸಿಕೊಳ್ಳುವುದನ್ನು ಕಲಿಯುತ್ತಾರೆ.

ಉಲ್ಲೇಖಗಳು

National Education Policy 2020, Department of Education Government of India, Delhi

National Curriculum Framework 2005, NCERT

Dewan Hriday Kant, (2017) Curricula: What can the school do in the life of the child, Voices of Teachers and Teacher Educators, 8-15, NCERT, August 2017, New Delhi



ಹೃದಯಕಾಂತ್ ದಿವಾನ್ ಅವರು ಪ್ರಸ್ತುತ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಭಾಷಾಂತರ ಉಪಕ್ರಮದೊಂದಿಗೆ ಕಾರ್ಯನಿರ್ವಹಿಸುತ್ತಿದ್ದಾರೆ. ಅವರು ಏಕಲವ್ಯ ಎಂಬ ಗುಂಪಿನ ಸ್ಥಾಪಕ ಸದಸ್ಯರು ಮತ್ತು ಉದಯಪುರದ ವಿದ್ಯಾಭವನ ಸೊಸೈಟಿಯ ಶೈಕ್ಷಣಿಕ ಸಲಹೆಗಾರರು. ಕಳೆದ ನಲವತ್ತು ವರ್ಷಗಳ ಅವಧಿಯಲ್ಲಿ ಅವರು ಶಿಕ್ಷಣ ಕ್ಷೇತ್ರದಲ್ಲಿ ನಾನಾ ರೀತಿಯ ಜವಾಬ್ದಾರಿಗಳನ್ನು ನಿಭಾಯಿಸಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ಶೈಕ್ಷಣಿಕ ಆವಿಷ್ಕಾರಗಳು ಮತ್ತು ರಾಜ್ಯ ಶೈಕ್ಷಣಿಕ ಸ್ವರೂಪಗಳ ಪರಿವರ್ತನೆಯ ಪ್ರಯತ್ನದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡವರು. ಅವರನ್ನು ಈ ಮಿಂಚಂಚೆ ಮೂಲಕ ಸಂಪರ್ಕಿಸಬಹುದು: hardy@azimpremjifoundation.org

ಅನುವಾದ: **ಮಂಜುನಾಥ್ ಚಾಂದ್** । ಪರಿಶೀಲನೆ: **ಲತಾ ಕೆ.ಸಿ.**